**ಪತ್ರಿಕಾ ಪ್ರಕಟಣೆ**

ವಿಜಯಪುರ

ದಿನಾಂಕ: 09.07.2021.

**1] ಮಹಿಳಾ ಪೊಲೀಸ ಠಾಣೆ ಗುನ್ನೆ ನಂ: 81/2021 ಕಲಂ: ಮಹಿಳೆ ಮತ್ತು ಮಗು ಕಾಣೆ.**

ದಿನಾಂಕ 27.06.2021 ರಂದು 11.30 ಗಂಟೆಯ ನಡುವೆ ಇದರಲ್ಲಿಯ ಕಾಣೆಯಾದ 1] ರಾಜೇಶ್ವರಿ ಗಂ॥ ಪ್ರಕಾಶ ಹಳ್ಳಿ ವಯಾ 32 ವರ್ಷ 2] ಪ್ರದೀಪ ತಂ॥ ಪ್ರಕಾಶ ಹಳ್ಳಿ ವಯಾ 14 ವರ್ಷ ಸಾ॥ ವಿಜಯಪುರ ಏಕತಾನಗರ ಇವಳು ಮಗನಾದ ಪ್ರದೀಪ ಇವನಿಗೆ ಕರೆದುಕೊಂಡು ಮನೆಯಲ್ಲಿ ಹಿರಿಯ ಮಗನಾದ ಚೇತನ ಹಳ್ಳಿ ಇವನಿಗೆ ನಾವು ಪಾರ್ಲರ್‌ಗೆ ಹೋಗಿ ಬರುತ್ತೆವೆ ಎಂದು ಹೇಳಿ ಹೋಗಿರುತ್ತಾರೆ. ಕಾಣೆಯಾಗಿರುವ ರಾಜೇಶ್ವರಿ ಇವರದು ಕೊಲು ಮುಖ, ಗೋದಿಗೆಂಪು ಮೈಬಣ್ಣ, ಮೈಯಿಂದ ಸಾದಾರಣ ಮೈಕಟ್ಟು, ಹಿಂದಿ, ಕನ್ನಡ ಬಾಷೆ ಮಾತನಾಡುತ್ತಾಳೆ. ಹೋಗುವಾಗ ಹಸಿರು ಬಣ್ಣದ ಚುಡಿದಾರ ಧರಿಸಿಕೊಂದ್ದು ಮತ್ತು ಮಗ ಪ್ರದೀಪ ಇವನು ಕೆಂಪು ಬಣ್ಣದ ನೈಟ ಟಿ ಶರ್ಟ ಮತ್ತು ಪ್ಯಾಂಟ ಧರಿಸಿದ್ದು, ಕನ್ನಡ ಮಾತಾಡುತ್ತಾನೆ. ಈ ಪ್ರಕಾರ ಚಹರೆ ಪಟ್ಟಿಯುಳ್ಳ ನನ್ನ ಹೆಂಡತಿ ಮತ್ತು ಮಗನಿಗೆ ಇಲ್ಲಿಯ ವರೆಗೆ ಹುಡುಕಾಡಿ ಸಿಗದೆ ಇದ್ದರಿಂದ ಈಗ ಬಂದು ಫಿರ್ಯಾದಿ ಕೊಡಲು ತಡವಾಗಿರುತ್ತದೆ. ಕಾರಣ ನನ್ನ ಹೆಂಡತಿ ಮತ್ತು ಮಗನಿಗೆ ತಪಾಸ್ ಮಾಡಿ ಕೊಡಲು ಪಿರ್ಯಾದಿ ಇರುತ್ತದೆ. ಈ ಬಗ್ಗೆ ಪ್ರಕಾಶ ಲಕ್ಷಣ ಹಳ್ಳಿ ಸಾ॥ ವಿಜಯಪುರ ಏಕತಾನಗರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 08.07.2021 ರಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ದೇವರ ಹಿಪ್ಪರಗಿ ಪೊಲೀಸ ಠಾಣೆ ಗುನ್ನಾ. ನಂ: 111/2021 ಕಲಂ: 15(ಎ) 32(3) ಕೆ.ಇ.ಆ್ಯಕ್ಟ.**

ದಿನಾಂಕ 07.07.2021 ರಂದು 14:10 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ ರವಿ ದುಂಡಪ್ಪ ಸಿಂದಗಿ, ಸಾ॥ ಚಿಕ್ಕರೂಗಿ, ತಾ॥ ದೇವರಹಿಪ್ಪರಗಿ ಈತನು ತನಗೆ ಸರಕಾರದಿಂದ ಯಾವುದೇ ಪರವಾನಿಗೆ ಇಲ್ಲದೆ ಅನಧಿಕೃತವಾಗಿ ಚಿಕ್ಕರೂಗಿ ಗ್ರಾಮದ ಅಂಬೀಗರ ಚೌಡಯ್ಯ ಸರ್ಕಲ್ ಹತ್ತಿರ ಇದ್ದ ಪಾನ್ ಶಾಪ್ ಬಾಜು ಸಾರ್ವಜನಿಕ ಸ್ಥಳದಲ್ಲಿ ಜನರಿಗೆ ಸರಾಯಿ ಕುಡಿಯಲು ಸ್ಥಳಾವಕಾಶ ಮಾಡಿಕೊಟ್ಟಾಗ ನಮ್ಮ ತಾಬಾಕ್ಕೆ ಸಿಕ್ಕಿದ್ದು ಈ ಬಗ್ಗೆ ಸ॥ ತ॥ ಶ್ರೀಮತಿ. ಎಸ್.ಬಿ. ನಡವಿನಕೇರಿ ದೇವರ ಹಿಪ್ಪರಗಿ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 08.07,2021 ರಂದು ದೇವರ ಹಿಪ್ಪರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ದೇವರ ಹಿಪ್ಪರಗಿ ಪೊಲೀಸ ಠಾಣೆ ಗುನ್ನಾ. ನಂ: 112/2021 ಕಲಂ: 15(ಎ) 32(3) ಕೆ.ಇ.ಆ್ಯಕ್ಟ.**

ದಿನಾಂಕ 07.07.2021 ರಂದು 17:40 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ ಅಶೋಕ ಸಿದ್ದಪ್ಪ ಸಾರವಾಡ, ಸಾ॥ ಚಿಕ್ಕರೂಗಿ, ತಾ॥ ದೇವರಹಿಪ್ಪರಗಿ ಈತನು ತನಗೆ ಸರಕಾರದಿಂದ ಯಾವುದೇ ಪರವಾನಿಗೆ ಇಲ್ಲದೆ ಅನಧಿಕೃತವಾಗಿ ಚಿಕ್ಕರೂಗಿ ಗ್ರಾಮದ ಬಸ್ ನಿಲ್ದಾಣ ಹತ್ತಿರ ಇದ್ದ ಪಾನ್ ಶಾಪ್ ಬಾಜು ಸಾರ್ವಜನಿಕ ಸ್ಥಳದಲ್ಲಿ ಜನರಿಗೆ ಸರಾಯಿ ಕುಡಿಯಲು ಸ್ಥಳಾವಕಾಶ ಮಾಡಿಕೊಟ್ಟಾಗ ನಮ್ಮ ತಾಬಾಕ್ಕೆ ಸಿಕ್ಕಿದ್ದು. ಈ ಬಗ್ಗೆ ಸ॥ ತ॥ ಶ್ರೀಮತಿ. ಎಸ್.ಬಿ. ನಡವಿನಕೇರಿ ದೇವರ ಹಿಪ್ಪರಗಿ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 08.07,2021 ರಂದು ದೇವರ ಹಿಪ್ಪರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಝಳಕಿ ಪೊಲೀಸ ಠಾಣೆ ಗುನ್ನಾ. ನಂ: 62/2021 ಕಲಂ: 15(ಎ) 32(3) ಕೆ.ಇ.ಆ್ಯಕ್ಟ.**

ದಿನಾಂಕ 08.07.2021 ರಂದು 15.15 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ ಮಂಜುನಾಥ ಅಣ್ಣಪ್ಪ ಚೌಧರಿ ಸಾ: ಕಪನಿಂಬರಗಿ ತಾ: ಇಂಡಿ. **ಈ**ತನು ತನ್ನ ಬಾಬತ್ತ ಇರುವ ಇಂಡಿ ತಾಲೂಕಿನ ಕಪನಿಂಬರಗಿ ಗ್ರಾಮದ ಆರೋಪಿತನು ತನ್ನ ಬಾಬತ್ತ ಇರುವ ಅಂಗಡಿಯ ಖೋಲಿಯಲ್ಲಿ ಸಾರ್ವಜನಿಕರಿಗೆ ಸರಾಯಿ ಕುಡಿಯಲು ನೀರು ಗ್ಲಾಸು ಕೊಟ್ಟು ಕುಡಿಯಲು ಅವಕಾಶ ಮಾಡಿ ಕೊಟ್ಟಿರುವ ಬಗ್ಗೆ ತಾನು ಸರಕಾರದಿಂದ ಯಾವುದೇ ಅನುಮತಿ ವ ಲೈಸನ್ಸ್‌ನ್ನು ಪಡೆಯದೆ ಸಾರ್ವಜನಿಕ ಸ್ಥಳದಲ್ಲಿ ತನ್ನ ಪಾಯ್ದೇಗೋಸ್ಕರ್ ತನ್ನ ಹತ್ತಿರ 1] 180 ಎಂ.ಎಲ್. ಅಳತೆಯ ಓಲ್ಡ್ ಟವರಿನ್ ಕಂಪನಿಯ ಸರಾಯಿ ಪೌಚು 01 ಶೀಲು ಒಡೆದಿದ್ದು, ಇದರಲ್ಲಿ ಅರ್ದಾದಷ್ಟು ಸರಾಯಿ ಇದ್ದದ್ದು ಅ.ಸ.ಕಿ: 00.00 ರೂ. ಮತ್ತು 2] 03 ಪ್ಲಾಸ್ಟಿಕ ಗ್ಲಾಸುಗಳು ಅಸಕಿ: 00–00 ಇವುಗಳನ್ನು ಅಂಗಡಿ ಖೋಲಿಯಲ್ಲಿ ಇಟ್ಟು ಸರಾಯಿ ಕುಡಿಯಲು ಬಂದವರಿಗೆ ನೀರು ಗ್ಲಾಸುಗಳು ಕೊಟ್ಟು ಸಹಕರಿಸುತ್ತಿರುವಾಗ ಸಿಕ್ಕ ಅಪರಾಧ. ಈ ಬಗ್ಗೆ ಸ:ತ: ಪಿ.ಎನ್. ಮನಗೂಳಿ ಪಿಎಸ್ಐ ಝಳಕಿ ಪೊಲೀಸ್ ಠಾಣೆ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 08.07,2021 ರಂದು ಝಳಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**5] ಬ ಬಾಗೇವಾಡಿ ಪೊಲೀಸ ಠಾಣೆ ಗುನ್ನಾ. ನಂ: 113/2021 ಕಲಂ: 15(ಎ) 32(3) ಕೆ.ಇ ಆ್ಯಕ್ಟ.**

ದಿನಾಂಕ 08.07.2021 ರಂದು 19:15 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ 1] ಹಣಮಂತ್ರಾಯ ಅಮರಪ್ಪ ಚೌಧರಿ ಸಾ: ಸಾಸನೂರ ಈತನು ಸಾಸನೂರ ಗ್ರಾಮದ ತನ್ನ ಕೂಲಡ್ರಿಂಕ್ಸ ಅಂಗಡಿಯಲ್ಲಿ ತನ್ನ ಪಾಯಿದೆಗೊಸ್ಕರ ಸಂಬಂಧಿಸಿದ ಪ್ರಾಧಿಕಾರದಿಂದ ಯಾವುದೇ ಲೈಸೆನ್ಸ ವ ಪರವಾನಿಗೆಯನ್ನು ಪಡೆಯದೆ ಸಾರ್ವಜನಿಕರಿಗೆ ಮದ್ಯ ಸೇವನೆ ಮಾಡಲು ಗ್ಲಾಸು, ನೀರು ಹಾಗೂ ತಿನಿಸು ಕೊಟ್ಟು ಅವಕಾಶ ಮಾಡಿಕೊಟ್ಟ ಅಪರಾಧ. ಈ ಬಗ್ಗೆ ಸ:ತ: ಬಸವರಾಜ ಎಮ್ ಪಾಟೀಲ ಪೊಲೀಸ್ ಇನ್ಸಪೆಕ್ಟರ್ ಬಸವನಬಾಗೇವಾಡಿ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 08.07,2021 ರಂದು ಬ ಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.